614. ಶ್ರೀ ಎಸ್.ಹೆಚ್. ಕೌಜಲಗಿ :– ಹಾಸ್ಟೆಲ್ ಇನ್‌ಸ್ಪೆಕ್ಷನ್ ಮಾಡಿರಿ.

ಉಪಾಧ್ಯಕ್ಷರು : ಈಗ ಅವರು ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಆರ್.ಎನ್. ನಾಯಕ್:– ಮಧ್ಯೆ ಹೀಗೆ ಇಂಟರ್‌ಫಿಯರ್ ಮಾಡಿದರೆ ಕ್ವೆಶ್ಚನ್ ಅವರ್‌ನಲ್ಲಿ ಕಷ್ಟವಾಗುತ್ತದೆ. ತಾವು ಆದೇಶ ಕೊಡಬೇಕು. ನಾವು ಪ್ರಶ್ನೆ ಕಳುಹಿಸಿದ ಮೇಲೆ ನಾಲ್ಕಾರು ಜನ ಎದ್ದುನಿಂತು ಮಾತನಾಡುವುದು ಏತಕ್ಕೆ? ಹಾಗಾದರೆ ಅವರೇ ಕ್ವೆಶ್ಚನ್ ಕಳುಹಿಸಿಬಿಡಲಿ.

ಉಪಾಧ್ಯಕ್ಷರು :– ಆಯಿತು., ಮಾತನಾಡಿ.

ರಾಜ್ಯದಲ್ಲಿರುವ ವಿದ್ಯಾರ್ಥಿನಿಲಯಗಳ ಬಗ್ಗೆ

614. ಶ್ರೀ ಆರ್.ಎನ್. ನಾಯಕ್ (ಭಟ್ಕಳ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು?

(ಆ) ಅವುಗಳ ಪೈಕಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು? ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

(ಇ) ಹಾಗಿದ್ದಲ್ಲಿ, ಸರ್ಕಾರ ಪ್ರತಿ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ?

ಶ್ರೀ. ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):–

ಅ) ಮೆಟ್ರಿಕ್ ಪೂರ್ವ – 69036

ಮೆಟ್ರಿಕ್‌ನಂತರ 14419

ಒಟ್ಟು – 83,455

ಆ)

	ವಿದ್ಯಾರ್ಥಿನಿಲಯಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ
1) ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	636	37,017
2) ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	19	1,012
3) ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳು	98	9,819
ಒಟ್ಟು	753	47,848

(ಇ) 1) ಮೆಟ್ರಿಕ್ ಪೂರ್ವ – ರೂ. 150

2) ಮೆಟ್ರಿಕ್‌ನಂತರದ – ರೂ. 200

(ಸರ್ಕಾರದವತಿಯಿಂದ ನಡೆಸುವ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ರೂ.150–00ರ ಭೋಜನ ವೆಚ್ಚದ ಜೊತೆಗೆ ಪಠ್ಯಪುಸ್ತಕ ಮತ್ತು ಲೇಖನ ಸಾಮಗ್ರಿಗಾಗಿ, ಸಮವಸ್ತ್ರಗಳನ್ನು ಪೂರೈಸುವ ಸಲುವಾಗಿ, ವೈದ್ಯಕೀಯ ಸೌಲಭ್ಯ, ಹಾಸಿಗೆ ಹಾಗೂ ಹೊದಿಕೆಯ ಪೂರೈಕೆ ಸಲುವಾಗಿ (3 ವರ್ಷಕ್ಕೊಮ್ಮೆ), ಕ್ಷೌರಕ್ಕಾಗಿ, ಅಲ್ಪಕಾಲಿಕ ಭೋದಕರಿಗಾಗಿ, ವಾರ್ತಾ ಪತ್ರಿಕೆಗಾಗಿ ಸೌಲಭ್ಯಗಳನ್ನು ಸದ ಒದಗಿಸಲಾಗುತ್ತಿದೆ).

ಶ್ರೀ ಆರ್.ಎನ್. ನಾಯಕ್ :– ಅಧ್ಯಕ್ಷರೇ, ನನಗೆ ಕೊಟ್ಟಿರುವ ಉತ್ತರದಲ್ಲಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ಒಬ್ಬರಿಗೆ 150 ರೂಪಾಯಿ, ಮೆಟ್ರಿಕ್ ನಂತರದ ವಿದ್ಯಾರ್ಥಿ ಒಬ್ಬರಿಗೆ 200 ರೂಪಾಯಿ ಖರ್ಚು ಮಾಡುತ್ತದೆ

ಸರ್ಕಾರ ಎಂದು ಉತ್ತರ ಕೊಟ್ಟಿದ್ದಾರೆ. ಆದರಲ್ಲಿ ಒಂದು ಕ್ಲಿಯರ್ ಆಗಬೇಕು. 150–200 ರೂಪಾಯಿಗಳು ವಿದ್ಯಾರ್ಥಿಗಳ ಬರೀ ಊಟದ ವೆಚ್ಚಕ್ಕೋ ಅಥವಾ ಬಟ್ಟೆಗೂ ಸೇರೋ ಎಂಬ ಬಗ್ಗೆ ಉತ್ತರ ಬೇಕು. ದಯಮಾಡಿ ನೋಟ್ ಮಾಡಿಕೊಳ್ಳಿ. ಎರಡನೆಯದು, 150 ರೂಪಾಯಿ, 200 ರೂಪಾಯಿ ಲೆಕ್ಕ ಹಾಕಿದರೆ ಪ್ರತಿಯೊಂದು ದಿವಸಕ್ಕೆ ಹೆಚ್ಚು ಕಡಿಮೆ 6–7 ರೂಪಾಯಿಯೊಳಗೆ ಒಂದೊಂದು ವಿದ್ಯಾರ್ಥಿಗೆ ಖರ್ಚಾಗುತ್ತದೆ. ಈ ಹಣದಲ್ಲಿ ಎರಡು ಊಟ, ಬೆಳಗ್ಗೆ ನಾಷ್ಟಾನೋ ತಿಂಡಿನೋ ಎಂಬುದನ್ನು ಹೇಳಬೇಕು. ಈ ಹಣದಲ್ಲಿ ಎರಡೂ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು. ಮೂರನೆಯದು, ಹಾಸ್ಟೆಲ್‌ಗಳು ಎಲ್ಲಿ ಕೇಳಿದರೂ ರಾಜ್ಯದಲ್ಲಿ ಸರಿಯಿಲ್ಲ. ಕಟ್ಟಡಗಳು ಸರಿಯಿಲ್ಲ, ಮತ್ತು ಊಟ ಉಪಚಾರ ಸರಿಯಿಲ್ಲ. ಈಗ ಕೊಡುತ್ತಿರುವ 200 ರೂಪಾಯಿಗಳು ವಿದ್ಯಾರ್ಥಿಗಳಿಗೆ ಮುಟ್ಟದೆ ಬೇರೆಯವರಿಗೆ ಹೋಗುತ್ತಿದೆ ಎಂಬ ಆಪಾದನೆ ಸಾರಾಸಗಟಾಗಿ ಬರುತ್ತಿದೆ. ಈ ಬಗ್ಗೆ ಯಾವುದಾದರೂ ತನಿಖೆಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೇ ಅಥವಾ ಶಾಸಕರ ಸಮಿತಿ ಮಾಡಿ ಏನೇನು ತೊಂದರೆ ಇದೆ ಅದನ್ನು ಪರಿಹಾರ ಮಾಡುವುದಕ್ಕೆ, ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತದೆಯೆ?

ಶ್ರೀ.ಬಿ. ಶಿವಣ್ಣ :– ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ನಿಜ. ಇಲ್ಲಿಯವರೆಗೆ ಪ್ರೀಮೆಟ್ರಿಕ್ ಹಾಸ್ಟೆಲ್‌ನಲ್ಲಿ 100 ರೂಪಾಯಿ ಕೊಡುತ್ತಿದ್ದರು. ನಾವು 50 ರೂಪಾಯಿ ಹೆಚ್ಚು ಮಾಡಿ 150 ರೂಪಾಯಿ ಕೊಡುತ್ತಿದ್ದೇವೆ. ಪೋಸ್ಟ್ ಮೆಟ್ರಿಕ್‌ನವರಿಗೆ 150 ರೂಪಾಯಿ ಕೊಡುತ್ತಿದ್ದರು, ಅದನ್ನು ಈಗ 200 ರೂಪಾಯಿ ಮಾಡಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ 50 ರೂಪಾಯಿ ಜಾಸ್ತಿ ಮಾಡಿದ್ದೇವೆ. ಈಗ ಪ್ರೈಸ್ ರೈಸ್ ಆಗಿರುವ ಕಾರಣ ಅವರು ಹೇಳಿದ ಮಾತಿಗೆ ಒಪ್ಪಬೇಕಾಗುತ್ತದೆ. ಫೈನಾನ್ಸ್ ಮಿನಿಸ್ಟರ್, ಫೈನಾನ್ಸ್ ಡಿಪಾರ್ಟ್‌ಮೆಂಟ್ ಕಾಂಟಾಕ್ಟ್ ಮಾಡಿ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅವ್ಯವಸ್ಥೆ ಎಂದು ಹೇಳಿದರು, ಅದರ ಬಗ್ಗೆ ಕೂಡ ನನಗೆ ಗೊತ್ತಿದೆ. ಹಾಸ್ಟೆಲುಗಳ ಬಗ್ಗೆ ಸಾಕಷ್ಟು ಕಂಪ್ಲೇಂಟ್ಸ್ ಇದೆ. ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳು ಹಾಸ್ಟೆಲ್‌ಗಳಿಗೆ ಭೇಟಿ ಕೊಡಬೇಕು, ಏನೇನು ಸೌಲಭ್ಯಗಳು ಬೇಕೋ ಅದನ್ನು ಒದಗಿಸಬೇಕು ಎಂದು ಹೇಳಿದ್ದೇವೆ. ಶಾಸಕರ ಕಮಿಟಿ ಮಾಡಿ ಎಂದು ಹೇಳಿದ್ದಾರೆ. ಮಾಡುವುದಕ್ಕೆ ನನಗೇನೂ ತೊಂದರೆ ಇಲ್ಲ. ಈಗ ಮೊದಲು ಆಫೀಸರ್ಸ್ ವಲಯದಲ್ಲಿ ಯಾವ ರೀತಿ ಇಂಪ್ರೂವ್‌ಮೆಂಟ್ ಮಾಡುತ್ತಾರೆ, ಅದನ್ನು ನೋಡಿ, ವಿಚಾರ ಮಾಡಿದ ಮೇಲೆ ಸಮಿತಿ ಬಗ್ಗೆ ಹೇಳಬಹುದು. ನಾವು ಇತರೇ ಸೌಲಭ್ಯಗಳನ್ನೂ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದೇವೆ. ವಿದ್ಯಾರ್ಥಿಗಳ ಪಠ್ಯಪುಸ್ತಕ, ಲೇಖನ ಸಾಮಗ್ರಿಗಳ ಬಗ್ಗೆ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ 100 ರೂಪಾಯಿಗಳನ್ನು ಸಮವಸ್ತ್ರಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷಕ್ಕೆ 150 ರೂಪಾಯಿಗಳನ್ನು ವೈದ್ಯಕೀಯ ಸೌಲಭ್ಯಕ್ಕೆ ಪ್ರತಿ ವರ್ಷ ಪ್ರತಿ ವಿದ್ಯಾರ್ಥಿಗೆ 100 ರೂಪಾಯಿಗಳನ್ನು ಹಾಸಿಗೆ, ಹೊದಿಕೆ ಪೂರೈಸುವುದಕ್ಕೆ ಮೂರು ವರ್ಷಕ್ಕೆ 300 ರೂಪಾಯಿಗಳನ್ನು, ವರ್ಷಕ್ಕೆ ಪ್ರತಿ ವಿದ್ಯಾರ್ಥಿಯ ಕ್ಷೌರಕ್ಕೆ 20 ರೂಪಾಯಿಗಳನ್ನು, ಅಲ್ಪ ಕಾಲಿಕ ಬೋಧಕರಿಗೆ 2,000 ರೂಪಾಯಿಗಳನ್ನು ಒಂದು ಹಾಸ್ಟೆಲಿಗೆ ಕೊಡುತ್ತೇವೆ. ಇಲ್ಲಿ ಇಬ್ಬರು ಟ್ಯೂಟರ್ಸ್ ಇರುತ್ತಾರೆ. ಇದಲ್ಲದೇ ವಾರಪತ್ರಿಕೆಗಳ ಬಗ್ಗೆ ಪ್ರತಿ ಹಾಸ್ಟೆಲಿಗೆ ವರ್ಷಕ್ಕೆ 500 ರೂಪಾಯಿಗಳನ್ನು ಕೊಡುವ ವ್ಯವಸ್ಥೆಯಾಗಿದೆ.

ಶ್ರೀ. ಎ.ವಿ. ಉಮಾಕಾಂತ್ :– ಈಗ ಏನು 100 ರಿಂದ 150 ಕ್ಕೂ 150 ರಿಂದ 200 ಕ್ಕೂ ಹೆಚ್ಚಿಸಿದ್ದೇವೆಂದು ಮಾನ್ಯ ಸಚಿವರು ಹೇಳಿದರು ಇದು ಕೇವಲ ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಮಾತ್ರವೋ ಇದೂ ಬ್ಯಾಕ್‌ವರ್ಡ್ ಕ್ಲಾಸಸ್ ಹಾಗೂ ಮೈನಾರಿಟೀಸ್‌ಗೂ ಅನ್ವಯಿಸುತ್ತದೋ ಮತ್ತೆ ಪ್ರೀಮೆಟ್ರಿಕ್ ಹಾಗೂ ಪೋಸ್ಟ್ ಮೆಟ್ರಿಕ್‌ಗೂ 150 ಹಾಗೂ 200 ರೂಪಾಯಿಗಳು ಎಂದು ಏಕೆ ವ್ಯತ್ಯಾಸ ಮಾಡುವುದು? ಈ 50 ರೂ. ತಾರತಮ್ಯವನ್ನು ತಪ್ಪಿಸಿ ಒಂದೇ ಸಮನಾಗಿ ಹಂಚಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಶಿವಣ್ಣ :– ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಮಾತ್ರ ಏರಿಸಲಾಗಿದೆ. ಇದು ಬ್ಯಾಕ್‌ವರ್ಡ್‌ಕ್ಲಾಸ್ ಹಾಗೂ ಮೈನಾರಿಟೀಸ್‌ಗೆ ಅನ್ವಯಿಸುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ :– ಹಿಂದೆ ಇದ್ದ 100 ರೂ.ಗಳನ್ನು 150 ರೂ.ಗಳಿಗೆ ಏರಿಸಿದ್ದೇವೆಂದು ಹೇಳಿದರು. ಆದರೆ ಈಗಿನ ಪರಿಸ್ಥಿತಿಯನ್ನು ಮಾನ್ಯ ಮಂತ್ರಿಗಳು ಅರ್ಥಮಾಡಿಕೊಳ್ಳಬೇಕು. 1974ರಲ್ಲಿ 100 ರೂ.

ಇದ್ದುದನ್ನು ಈಗ 150ಕ್ಕೆ ಏರಿಸಿದರೆ ಅದು ಸಾಕಾಗುವುದಿಲ್ಲ. ಈ ಹಣ ನಮ್ಮ ವಿದ್ಯಾರ್ಥಿಗಳಿಗೆ ಯಾವುದಕ್ಕೆ ಸಾಕಾಗುತ್ತದೆ? ಇನ್ನು ಅಧಿಕಾರಿಗಳನ್ನು ಕಳುಹಿಸಿ ಸರ್ವೇ ಮಾಡಿಸುತ್ತೇವೆಂದು ಹೇಳಿದರು. ಇವತ್ತು ರೂಪಾಯಿ ಮೌಲ್ಯ ಎಷ್ಟಾಗಿದೆ ಎಂದು ಎಲ್ಲರಿಗೂ ಗೊತ್ತಿರುವ ವಿಚಾರ ಇವತ್ತು ಬೆಲೆಗಳು ದುಬಾರಿಯಾಗುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಿಂದ ಬರುವ ಈ ಮಕ್ಕಳಿಗೆ ಇದನ್ನು 250 ರೂ.ಗಳಿಗೆ ಏರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ? ಇದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಬಿ. ಶಿವಣ್ಣ :– ಈಗ ಕೊಡುತ್ತಿದ್ದೇವೆ. ನೀವು ಹೇಳಿದ್ದರ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆ. ಏಕೆಂದರೆ ನಾವು ಹಣಕಾಸಿನ ಪರಿಸ್ಥಿತಿಯನ್ನೂ ಕೂಡಾ ನೋಡಬೇಕಾಗುತ್ತದೆ.

ಶ್ರೀ ಅಂಜನಮೂರ್ತಿ : ಈಗ 3 ಹಾಗೂ 4ನೇ ತರಗತಿ ಓದುತ್ತಿರುವ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಇದೆ. ಆದರೆ 3–4ನೇ ತರಗತಿಯಲ್ಲಿ ಓದುತ್ತಿರುವ ಗಂಡು ಮಕ್ಕಳಿಗೆ ಕೆಲವು ವರ್ಷಗಳಿಂದ ವಿದ್ಯಾರ್ಥಿವೇತನ ಕೊಡುತ್ತಿದ್ದಾರೆ. ಆದರೆ ಈ ಸಾರಿಯಿಂದ ಈ ಗಂಡು ಮಕ್ಕಳಿಗೆ ವಿದ್ಯಾರ್ಥಿವೇತನ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಹೆಣ್ಣುಮಕ್ಕಳಿಗೆ ಕೊಡುತ್ತಿದ್ದೀರಲ್ಲಾ ಎಂದು ಕೇಳಿದರೆ ಗೌರ್ನಮೆಂಟ್ ಆರ್ಡರ್ ಆ ರೀತಿ ಇದೆ ಎಂದು ಹೇಳುತ್ತಾರೆ. ಸರ್ಕಾರ ಪರಿಶಿಷ್ಟ ಜಾತಿಯ ಹೆಣ್ಣು ಮತ್ತು ಗಂಡು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹೆಚ್ಚಿನ ಮಟ್ಟದಲ್ಲಿ ಕೊಡಬೇಕೆಂದಿದ್ದರೆ 3–4ನೇ ತರಗತಿಯಲ್ಲಿ ಓದುತ್ತಿರುವ ಗಂಡುಮಕ್ಕಳಿಗೂ ವಿದ್ಯಾರ್ಥಿವೇತನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಶಿವಣ್ಣ :– ಈ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀಮತಿ ಮೋಟಮ್ಮ :– ಹೇರ್ ಕಟಿಂಗ್‌ಗೆ ವರ್ಷಕ್ಕೆ 20 ರೂಪಾಯಿ ಕೊಡುತ್ತಿದ್ದು ಈ ಹಣದಲ್ಲಿ ಎಷ್ಟು ಸಾರಿ ಹೇರ್‌ಕಟ್ ಮಾಡಿಸಬಹುದು? ಇವತ್ತು ಒಂದು ಸಾರಿ ಹೇರ್ ಕಟ್‌ಗೆ 8 ರಿಂದ 10 ರೂಪಾಯಿ ಇದೆ. ವರ್ಷಕ್ಕೆ 20 ರೂಪಾಯಿ ಎಂದರೆ ಮಕ್ಕಳಿಗೆ ಹೇರ್‌ಕಟ್ ಆಗುತ್ತದೆಯೇ? ಜತೆಯಲ್ಲಿ ಆಹಾರಕ್ಕೆಂದು ಏನು 200 ರೂಪಾಯಿ ಕೊಡುತ್ತಿದ್ದೀರಿ ಅದರಲ್ಲಿ ಅರ್ಧ ಅಲ್ಲಿ ಇರೋರೇ ನುಂಗಿಹಾಕುತ್ತಾರೆ. ಒಂದೊಂದೂ ಹಾಸ್ಟೆಲ್‌ನಲ್ಲೂ ಸ್ನಾನಕ್ಕೆ ವ್ಯವಸ್ಥೆ ಇಲ್ಲ. ನನ್ನ ಜಿಲ್ಲೆಯಲ್ಲಿ ಹಾಸ್ಟೆಲ್‌ಗಳನ್ನು ಹೋಗಿ ನೋಡಿ ಕೇಳಿದ್ದಕ್ಕೆ, ಮಕ್ಕಳಿಗೆ ಸ್ನಾನ ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಕೊಡುವ ಹಣವೇ ಸಾಲುವುದಿಲ್ಲ ಇನ್ನು ಸ್ನಾನಕ್ಕೆ ಸೌದೆ ಎಲ್ಲಿಂದ ತರುವುದು ಎಂದು ಹೇಳಿದರು. ನಾವು ಅಡಿಗೆ ಮಾಡುವಾಗ ಒಲೆ ಕಾಯ್ದಿರುತ್ತದೆ. ಕಾಯ್ದಿರುವ ಒಲೆಯ ಮೇಲೆ ಹಂಡೆ ಇಟ್ಟರೆ ನೀರು ಕಾಯುತ್ತದೆ. ಅಲ್ಲಿರತಕ್ಕ ಮಕ್ಕಳಿಗೆ ಅರ್ಧರ್ಧ ಬಕೆಟ್ ನೀರು ಕೊಟ್ಟರೆ ಸ್ನಾನ ಮಾಡಿಕೊಳ್ಳುತ್ತವೆ. ಮಾನ್ಯ ಸಚಿವರಿಗೆ ಈ ವಿಚಾರ ಗೊತ್ತಿರಬಹುದು, ಅವರು ಸಹ ಹಾಸ್ಟಲ್‌ನಿಂದ ಬಂದಿದ್ದಾರೆಂದು ನನ್ನ ಅನಿಸಿಕೆ. ದಯಮಾಡಿ ತಾವು ಈ ಖಾತೆಯನ್ನು ಹೊತ್ತಿದ್ದೀರಿ ಏನಾದರೂ ಒಂದು ಸುಧಾರಣೆಯನ್ನು ಮಾಡಿ. 500 ರೂಪಾಯಿಗಳನ್ನು ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಇವತ್ತಿನ ಬೆಲೆ ಏರಿಕೆಯಲ್ಲಿ ಹಾಸ್ಟಲ್‌ಗಳಲ್ಲಿರತಕ್ಕ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ. ಎಂ.ಪಿ. ವೆಂಕಟೇಶ್ :– ಯಾವುದೇ ಸರ್ಕಾರ ಬಂದರೂ ಸಮಾಜ ಕಲ್ಯಾಣ ಇಲಾಖೆಯನ್ನು ಪರಿಶಿಷ್ಟ ಜಾತಿಯವರಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಪರಿಶೀಲನೆ ಮಾಡುತ್ತೇನೆಂದು ಹೇಳುವುದಕ್ಕೆ ಹೋಗಬೇಡಿ. ಪರಿಶಿಷ್ಟ ಜಾತಿಯವರಿಗೆ ಇದು ಸಂಬಂಧಪಟ್ಟಿರುವುದರಿಂದ ಈ ಖಾತೆಯನ್ನು ಹೊತ್ತು ಕೊಂಡಿರುವುದರಿಂದ ತಾವು ಕೆಲಸ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ ಅರೇ ಆ ಜನಾಂಗದವರಿಗೆ ಆ ಖಾತೆಯನ್ನು ಕೊಟ್ಟಿದ್ದೇವೆ ಮಾಡಿದರೆ ಬೇಡ ಎನ್ನುತ್ತೇವೆಯೇ ಎನ್ನುವ ಮಾತನ್ನು ಹೇಳುತ್ತಾರೆ. ಈಗಿನ ಮುಖ್ಯಮಂತ್ರಿಗಳು ಬೇಡವೆಂದು ಹೇಳುವುದಿಲ್ಲ. ನೀವು ಧೈರ್ಯದಿಂದ 500 ರೂಪಾಯಿ ಮಾಡಿ. ಯಾರೂ ಇಲ್ಲವೆಂದು ಹೇಳುವುದಿಲ್ಲ. ಶಾಸಕರು ಯಾರೂ ತಕರಾರು ಮಾಡುವುದಿಲ್ಲ. ಧೈರ್ಯವಾಗಿ 500 ರೂಪಾಯಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ. ಪರಿಶೀಲನೆ ಮಾಡುತ್ತೇನೆಂದು ಹೇಳುವುದಕ್ಕೆ ಬದಲು 500 ರೂಪಾಯಿ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡಿ.

ಶ್ರೀ ಆರ್.ಎನ್. ನಾಯಕ್ :– ಮಾನ್ಯ ಉಪಾಧ್ಯಕ್ಷೆಣಿಯವರೆ, ನಮ್ಮ ಮನೆಗಳಲ್ಲಿ ಒಂದು ಪದ್ಧತಿ ಇರುತ್ತದೆ. ಮನೆಯಲ್ಲಿ ಗೃಹಿಣಿಯೊಬ್ಬರು ಇರುತ್ತಾರೆ. ಗೃಹಸ್ಥರಾದವರು ಆಕೆಗೆ ಹಣ ಕೊಟ್ಟು ಹೇಳುತ್ತಾರೆ

ಊಟಕ್ಕೆ ಇಂಥಿಂಥದ್ದು ತಯಾರು ಮಾಡಬೇಕೆಂದು ಹೇಳುತ್ತಾರೆ. ಪ್ರತಿ ದಿವಸ ಏಳು ರೂಪಾಯಿ ಕೊಡುವ ಯಜಮಾನರು ಊಟಕ್ಕೆ ಏನೇನು ಕೊಡುತ್ತೀರಿ? ಏನೇನು ಕೊಡಬೇಕೆಂದು ಆದೇಶವನ್ನು ನೀವು ಕೊಡುತ್ತೀರಿ? ಇಷ್ಟು ತರಕಾರಿ ಕೊಡಬೇಕು, ಇಡ್ಲಿ ತಿಂಡಿ ಕೊಡಬೇಕು, ಎಣ್ಣೆ ಬೆಣ್ಣೆ, ಹಾಲು ಮೊಸರು ಏನಾದರೂ ಕೊಡುವುದಕ್ಕೆ ಈ ತರಹ ಕೊಡಬೇಕೆನ್ನುವ ಪಟ್ಟಿಯನ್ನು ಕೊಡುತ್ತೀರಾ ಹೇಗೆ? ನೀವು 200 ರೂಪಾಯಿ ಕೊಟ್ಟರೆ ಆಥವಾ 500 ರೂಪಾಯಿ ಕೊಡಿ ಹಾಸ್ಟಲ್ ಸೂಪರ್‌ಇನ್‌ಟೆಂಡೆಂಟ್ ಅವರಿಗೆ ಒಂದು ಪಟ್ಟಿಯನ್ನು ಕೊಟ್ಟು ಒಂದು ಊಟಕ್ಕೆ ಇಂಥಿಂಥ ಪದಾರ್ಥ ಇರಬೇಕೆಂದು ಈ ತರಹ ಮಾಡಬೇಕೆನ್ನುವ ಪಟ್ಟಿಯನ್ನು ನೀವು ಕೊಟ್ಟಿದ್ದೀರಾ? ದುಡ್ಡು ಆಮೇಲೆ ಜಾಸ್ತಿ ಕೊಡಿ.

ಶ್ರೀ ಬಿ. ಶಿವಣ್ಣ :– ಮಾನ್ಯ ಉಪಾಧ್ಯಕ್ಷೆಣಿಯವರೆ, ಮಾನ್ಯ ಸದಸ್ಯರು ಹೇಳಿದ್ದೆಲ್ಲ ಇರಬೇಕೆನ್ನುವುದು ನನಗೂ ಅನಿಸುತ್ತದೆ. ನಮ್ಮ ಹಿರಿಯರು ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಫೈನಾನ್ಸ್ ಮಿನಿಸ್ಟರ್‌ರವರು ದುಡ್ಡು ಕೊಟ್ಟಮೇಲೆ ನಮ್ಮ ಇಲಾಖೆಯವರು ಎಲ್ಲವನ್ನು ನೋಡಿಕೊಂಡು ಹಣವನ್ನು ಆಮೇಲೆ ಖರ್ಚುಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹಣ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಬಹಳ ಧಾರಾಳವಾಗಿದ್ದಾರೆ. ತಾವು 500 ರೂಪಾಯಿ ಮಾಡಿ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದ ಬಗ್ಗೆ

513. ಶ್ರೀ ಆಂಜನಮೂರ್ತಿ (ನೆಲಮಂಗಲ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ಸಾಲುಗಳಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಅಭಿವೃದ್ಧಿ ನಿಗಮವು ವಿಶೇಷ ಘಟಕ ಯೋಜನೆಗಳ ಅಡಿಯಲ್ಲಿ ನೆಲಮಂಗಲ ಮತ ಕ್ಷೇತ್ರಕ್ಕೆ ನೀಡಿದ ಹಣವೆಷ್ಟು? (ಹೋಬಳಿವಾರು ಗ್ರಾಮವಾರು ಮಾಹಿತಿಯನ್ನು ಒದಗಿಸುವುದು);

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

ಅ)

	ರೂ.
1987–88	385050–00
1988–89	554250–00
1989–90	290155–00
ಒಟ್ಟು	1229455–00

ಹೋಬಳಿ : ಗ್ರಾಮವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.